
ಹೋಲಿಸಿದರೆ ನಾನು ಬಟ್ಟೆಗೆ ಖರ್ಚು ಮಾಡುವುದು ಅಷ್ಟೇನೂ ದೊಡ್ಡದಲ್ಲ ಬಿಡಿ ಎಂದು ನನಗೆ ಪುಕ್ಕಟೆ ಮಂಗಳಾರತಿ ಬೇರೆ ಆಕೆಯಿಂದ ಸಿಕ್ತು. ಈಕೆಗೆ ಗಂಡನಿಗಿಂತಲೂ ಬಟ್ಟೆಯ ಬಗ್ಗೆಯೇ ಹೆಚ್ಚಿನ ಗೌರವ ಎಂಬುದು ನನಗೆ ಜ್ಞಾನೋದಯವಾಗಿ ನಾನು ತೆಪ್ಪಗಾಗಬೇಕಾಯಿತು.

ಕೆಲವೊಮ್ಮೆ ಹೆಂಡತಿಯ ಪ್ರೀತಿ ಗಂಡ ಕೊಡಿಸುವ ಬಟ್ಟೆಯ ಮೇಲೂ (ಅವ)ಲಂಬಿಸಿರುತ್ತದೆ. ಬೇಕಿದ್ದರೆ ನೀವೇ ಪ್ರಯತ್ನಿಸಿ ನೋಡಿ. ನಿಮ್ಮ ಹೆಂಡತಿಗೆ ದುಬಾರಿ ರೇಷ್ಮೆ ಸೀರೆ ತೆಗೆಸಿಕೊಟ್ಟಾಗ, ಹುಣ್ಣಿಮೆಯ ಚಂದ್ರನನ್ನು ಕಂಡಾಗ ಸಮುದ್ರದ ಅಲೆಗಳು ಉಕ್ಕೇರುವಂತೆ ಆಕೆಯ ಪ್ರೀತಿ ನಿಮ್ಮ ಮೇಲೆ ಉಕ್ಕೇರುತ್ತದೆ. ಒಂದು ವೇಳೆ ಹಬ್ಬದಲ್ಲಿ ನೀವು ಸೀರೆ ತೆಗೆಸಿಕೊಟ್ಟಿಲ್ಲ ಎಂದಾದರೆ, ಸಂಪಿಗೆ ಹಾಗಿದ್ದ ಹೆಂಡತಿ ತಕ್ಷಣಕ್ಕೆ ಕೆಂಡ ಸಂಪಿಗೆಯಂತೆ ಬದಲಾಗಿ ಬಿಡುವ ಸಾಧ್ಯತೆ ಹೆಚ್ಚು.

ಮನುಷ್ಯನ ಹುಟ್ಟು, ಬದುಕು ಮತ್ತು ಸಾವನ್ನು ಬಟ್ಟೆ ಸದಾ ಆವರಿಸುತ್ತದೆ ಎಂಬುದೂ ವಿಶೇಷವೇ. ಮಗು ಹುಟ್ಟಿದ ತಕ್ಷಣ ಅದನ್ನು ಬೆಚ್ಚಗಿಡಲು ಬಟ್ಟೆ ಅನಿವಾರ್ಯ. ಬದುಕಿನಲ್ಲೂ ಅಷ್ಟೇ. ಎಲ್ಲಾ ಹಂತಗಳಲ್ಲೂ ಬಟ್ಟೆ ಧರಿಸುವುದು ಅಗತ್ಯ. ಮನುಷ್ಯ ಸತ್ತಾಗಲೂ ಶವವನ್ನು ಬಟ್ಟೆಯಿಂದ ಮುಚ್ಚಿಯೇ ಅಂತಿಮ ಗೌರವ ಸಲ್ಲಿಸುವುದು ಎಲ್ಲಾ ಧರ್ಮಗಳಲ್ಲಿಯೂ ಬೆಳೆದು ಬಂದಿರುವ ರೂಢಿ.

ಬಟ್ಟೆಯನ್ನು ಉಪಯೋಗಿಸುವಲ್ಲಿ ಹಳ್ಳಿಗರಿಗೂ ಮತ್ತು ಪೇಟೆಯಲ್ಲಿರುವವರಿಗೂ ಅಜಗಜಾಂತರ. ಉದಾಹರಣೆಗೆ ನೋಡಿ. ಹಳ್ಳಿಗಳಲ್ಲಿರುವ ರೈತರು ತಮ್ಮ ಹೆಗಲ ಮೇಲೆ ಸದಾ ಟವೆಲ್ ಒಂದನ್ನು ಹಾಕಿಕೊಂಡಿರುತ್ತಾರೆ. ಆದರೆ ಬಚ್ಚಲು ಮನೆಯಿಂದ ಹೊರಗೆ ಬಂದಾಗಲೂ ಈ ರೀತಿ ಟಾವೆಲ್ ಧರಿಸುವುದು ದೊಡ್ಡ ದೊಡ್ಡ ನಗರಗಳಲ್ಲಿ ಅಪರೂಪವೇ. ಹೆಗಲ ಮೇಲೆ ಟವೆಲ್ ಧರಿಸುವವನನ್ನು ಎಚ್.ಎಂ.ಟಿ. ಎಂದು ತಮಾಷೆ ಮಾಡುವುದುಂಟು.



ಈ ಟವೆಲ್ ಎಷ್ಟೊಂದು ಬಹುಪಕಾರಿ ಎಂದರೆ, ನೆಗಡಿಯಾಗಿ ಮೂಗು ಸೋರುತ್ತಿದ್ದರೆ ಈ ಟವೆಲ್ಲನ್ನೇ ಅಣೆಕಟ್ಟೆಯಂತೆ ಅಡ್ಡ ಬಳಸಿ ಆ ಸೋರುವಿಕೆಯನ್ನು ತಡೆಗಟ್ಟಬಹುದು. ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಸೀಟು ಹಿಡಿಯುವುದಕ್ಕೂ ಆ ಟವೆಲ್ಲನ್ನು ಹೊರಗಿನಿಂದಲೇ ಬಸ್ಸಿನ ಕಿಟಕಿಯ ಒಳಗೆ ತೂರಿಸಿ ರಿಸರ್ವ್ ಮಾಡಬಹುದು. ಮದುವೆ ಮನೆಯಲ್ಲಿ ಊಟಕ್ಕೆ ಕುಳಿತುಕೊಳ್ಳಲು ಚಾಪೆ ಸಿಗದಿದ್ರೆ ಇದೇ ಟವೆಲ್ ಆಸನವಾಗಿಯೂ ಉಪಯೋಗಕ್ಕೆ ಬಂದೀತು. ಇನ್ನು ಬೈಕು, ಸ್ಕೂಟರುಗಳ ಸೀಟು ದೂಳು ಮೆತ್ತಿಕೊಂಡು ರಾಡಿ ಆದಾಗ ಶುಚಿಗೊಳಿಸುವುದಕ್ಕೂ ಇದು ಆಪದ್ಬಾಂಧವ.

ಸಂತೆಯಲ್ಲಿ ತರಕಾರಿ ಕೊಂಡಾಗ, ಒಂದು ವೇಳೆ ಅದನ್ನು ತುಂಬಿಸಿಕೊಳ್ಳಲು ಚೀಲ ಸಿಗದಿದ್ದರೆ ಈ ಟವೆಲಿನಲ್ಲಿಯೇ ಅವುಗಳನ್ನು ಹಾಕಿ ಪುಟ್ಟ ಕೈಚೀಲವನ್ನಾಗಿ ಉಪಯೋಗಿಸಿಕೊಳ್ಳಬಹುದು. ಇನ್ನು ನಾಯಿ ಸರಪಳಿ ತುಂಡಾದಾಗ ನಾಯಿಯನ್ನು ಕಟ್ಟಿ ಹಾಕುವುದಕ್ಕೂ ಟವೆಲ್ಲೇ ಬೇಕು. ಸ್ನಾನ ಮಾಡಿ ಮೈ ಒರೆಸಿಕೊಳ್ಳುವುದಕ್ಕೆ, ಲುಂಗಿ ಹರಿದಾಗ ಅಂಡರ್‌ವೇರ್ ಮುಚ್ಚಿಕೊಳ್ಳುವುದಕ್ಕೂ ಈ ಟವೆಲ್ ಅನುಕೂಲ. ಒಂದರ್ಥದಲ್ಲಿ ಟವೆಲ್ಲೇ ಬಡವರ ಮುಂಡಾಸೂ ಹೌದು. ರೈತರು ಹೊಲದಲ್ಲಿ ದುಡಿಯುವಾಗ ತಲೆ ಮೇಲೆ ಟವಲ್ ಇದ್ದರೆ ತಂಪು ಚಪ್ಪರ ಇದ್ದಂತೆ. ಹೀಗಾಗಿ ಕೆಲವು ಗಂಡಸರು ತಿರುಗಾಟಕ್ಕೆ ಹೋಗುವಾಗ ಸ್ವಂತ ಹೆಂಡತಿಯನ್ನು ಮರೆತರೂ, ಟವೆಲ್ಲನ್ನು ಹೆಗಲ ಮೇಲೆ ಇಟ್ಟುಕೊಂಡು ಹೋಗುವುದಕ್ಕೆ ಮಾತ್ರ ಮರೆಯುವುದಿಲ್ಲ. ಅಷ್ಟಕ್ಕೂ ಹೆಗಲ ಮೇಲೆ ಹೆಂಡತಿಯನ್ನು ಕೂರಿಸಿಕೊಂಡು ಹೋಗುವಷ್ಟು ಕಷ್ಟವೇನಲ್ಲ ಈ ಟವೆಲ್ಲನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗುವುದು. ಹೆಂಡತಿ ಜೊತೆಯಲ್ಲಿದ್ದರೆ ಆಕೆ ಗಂಡನ ಮಾತು ಕೇಳುವುದಿಲ್ಲ. ಹೆಂಡತಿಯ ಮಾತನ್ನೇ ಗಂಡ ಕೇಳಬೇಕಾಗುತ್ತದೆ. ಆದರೆ ಈ ಬಡಪಾಯಿ ಟವೆಲ್ ಹಾಗಲ್ಲ. ಈತ ಏನೇ ಹೇಳಿದರೂ ಅದು 'ಮೌನಂ ಸಮ್ಮತಿ ಲಕ್ಷಣಂ' ಎಂಬಂತೆ ಒದಗಿ ಬರುವುದರಿಂದ ಕೆಲವೊಮ್ಮೆ ಹೆಂಡತಿಗಿಂತ ಟವೆಲ್ಲನ್ನೇ ಅಮರ ಮಧುರ ಪ್ರೇಮ ಎಂದುಕೊಂಡವರಿದ್ದಾರೆ.

ನಮ್ಮಲ್ಲಿ ಬಸ್ ಸೀಟು ರಿಸರ್ವ್ ಮಾಡುವಾಗ ಕಿಟಕಿಯಿಂದ ಬಟ್ಟೆಗಳನ್ನು ತೂರಿಸುವ ದೃಶ್ಯ ನೋಡಿದ ವಿದೇಶಿ ಮಹಿಳೆಯೊಬ್ಬಳು, ಇದು ಬಸ್ಸೋ ಅಥವಾ ವಾಷಿಂಗ್ ಮಷೀನ್ನೋ ಎಂದು ನಿಜಕ್ಕೂ ಆಶ್ಚರ್ಯಭರಿತಳಾಗಿ ಪ್ರಶ್ನಿಸಿದ್ದಳಂತೆ. ನಮ್ಮ ದೇಶದಲ್ಲಿ ಬಟ್ಟೆ ಒಣಗಿ ಹಾಕುವ ಚಂದ ನೋಡಬೇಕು. ಇದರಲ್ಲಿ ಯಾವುದೇ ಮಡಿವಂತಿಕೆ ಇರಲ್ಲ. ಮನೆ ಮುಂದೆ ತೋರಣದಂತೆ ದಾರ ಕಟ್ಟಿ, ಎಲ್ಲೆಂದರಲ್ಲಿ ಬಟ್ಟೆ ಒಣ ಹಾಕುವ ಪರಿಪಾಟವಿದೆ. ಹಪ್ಪಳ ಒಣಗಿಸಿದಷ್ಟೇ ಬಿಂದಾಸಾಗಿ ಒಳ ಉಡುಪುಗಳನ್ನು ಬಹಿರಂಗವಾಗಿ ಒಣಗಿಸುವ ರೂಢಿ ನಮ್ಮಲ್ಲಿ ಸಾಮಾನ್ಯ. ಇದು ಚಪಾತಿಯನ್ನೇ ಹರಗಿಟ್ಟಂತಹ ದೃಶ್ಯ.

ಅಪರಾಧಿಯನ್ನು ಗಲ್ಲು ಗಂಬಕ್ಕೆ ಹಾಕಿದಂತೆಯೇ ಬಟ್ಟೆಯನ್ನೂ ಸಿಕ್ಕಸಿಕ್ಕ ಕಂಬಕ್ಕೆಲ್ಲ ನೇತು ಹಾಕಿ ವಿನಾ ಕಾರಣ ಗಲ್ಲು ಶಿಕ್ಷೆ ನೀಡುವ ಪರಿಪಾಠ ನಮ್ಮಲ್ಲಿದೆ. ಅಷ್ಟಕ್ಕೂ ಇಂಥ ಕಟುಶಿಕ್ಷೆ ಅನುಭವಿಸುವಂತಹ ಅಪರಾಧವನ್ನು ಆ ಬಡಪಾಯಿ ಬಟ್ಟೆ ಏನು ಮಾಡಿದೆಯೋ ಗೊತ್ತಿಲ್ಲ. ಮನೆಯ ಕಿಟಕಿ, ಗೋಡೆ, ಬಾಗಿಲುಗಳಿಗೂ ತಮ್ಮ ಚಡ್ಡಿ, ಒಳಚಡ್ಡಿ, ಕುಚ ಕೌಪೀನಗಳನ್ನು ಯಾವುದೇ ಮುಜುಗರವಿಲ್ಲದೇ ನೇತುಹಾಕಿ, ತಮ್ಮ ಕುಟುಂಬದವರೆಲ್ಲರ ಬಟ್ಟೆಯ ಒಳಗುಟ್ಟನ್ನೆಲ್ಲ ಬಟಾಬಯಲು ಮಾಡುವ ಚಾಳಿ ಇಂದಿಗೂ ಅನೇಕ ಕಡೆ ಚಾಲ್ತಿಯಲ್ಲಿದೆ. ಆದರೆ ಸಿಂಗಪುರದಲ್ಲಿ ಹೀಗೆ ಬೇಕಾಬಿಟ್ಟಿ ಬಟ್ಟೆ ಒಣಗಿಸುವ ಹಾಗಿಲ್ಲ. ಸಿಂಗಪುರದ ಅಂದಕ್ಕೆ ಈ ರೀತಿಯ ಬಟ್ಟೆ ಒಣಗಿಸುವಿಕೆ ಧಕ್ಕೆ ತರಬಹುದು ಎಂಬುದು ಅಲ್ಲಿಯ ಸರ್ಕಾರದ ಕಳಕಳಿಯಾದ್ದರಿಂದ ಈ ಬಗ್ಗೆ ಪ್ರತ್ಯೇಕ ಕಾನೂನನ್ನೇ ಮಾಡಲಾಗಿದೆ.

ನಮ್ಮ ಹಳ್ಳಿಯಲ್ಲಿ ಜರುಗಿದ ಒಂದು ಘಟನೆ. ನಾಲ್ಕೂವರೆ ಅಡಿಯ ಕುಳ್ಳನೊಬ್ಬ ಹುಡುಗಿ ನೋಡಲು ಹೋಗಿದ್ದ. ಆದರೆ ಆ ಹುಡುಗಿ 5 ಅಡಿ ಎತ್ತರದವಳಾಗಿದ್ದಳು. ಆದರೂ ಆತ ಆಕೆಯೇ ತನಗೆ ಬೇಕು ಎಂದು ಹಟ ಹಿಡಿದ. ತನ್ನ ಮನೆಯಲ್ಲಿ ಎತ್ತರದ ಜಾಗದಲ್ಲಿ ಬಟ್ಟೆ ಒಣಗಿಸಲು ಆಕೆ ಸಹಾಯಕ್ಕೆ ಬರುತ್ತಾಳೆ ಎಂಬುದು ಆತನ ಆಯ್ಕೆಯ ಮುಖ್ಯ ಕಾರಣವಾಗಿತ್ತು!

ಮದುವೆ, ಮುಂಜಿ ಹಬ್ಬ ಹರಿದಿನ, ಮತ್ತಿತರ ಸಂತೋಷದ ಸಂದರ್ಭಗಳಲ್ಲಿ ಬಟ್ಟೆ ಖರೀದಿಸುವುದು ಅಥವಾ ಕುಟುಂಬಸ್ಥರಿಗೆ, ನೆಂಟರಿಷ್ಟರಿಗೆ ಬಟ್ಟೆ ನೀಡುವುದು ನಮ್ಮ ಹಿಂದೂ ಸಂಸ್ಕೃತಿಯ ಭಾಗವೇ ಆಗಿದೆ. ಅಷ್ಟೇ ಏಕೆ? ಯಾರಾದರೂ ನಿಧನರಾದಾಗ, ಅವರ ವೈಕುಂಠ ಸಮಾರಾಧನೆಯ ದಿನ ಬಂಧುಗಳು ದುಃಖದ ಜವಳಿಯನ್ನು ಉಡುಗೊರೆಯ ರೀತಿಯಲ್ಲಿ ಹಂಚುವ ಪರಿಪಾಟವೂ ನಮ್ಮಲ್ಲಿದೆ. ಹೀಗೆ ವೈಕುಂಠದಿಂದ ವೈಕುಂಠ ಸಮಾರಾಧನೆಯವರೆಗೂ ಬಟ್ಟೆಯ ಬಂಧುರತೆ ಇದ್ದೇ ಇದೆ. ಬಾಗಿನದಿಂದ ಹಿಡಿದು ಬಾಣಂತನದವರೆಗೂ ಬಟ್ಟೆಯ ದರ್ಬಾರ್ ಇದ್ದೇ ಇರುತ್ತದೆ.

ಮನುಷ್ಯ ಇದ್ದಲ್ಲೆಲ್ಲ ಈ ಬಟ್ಟೆ ಬೆನ್ನಿಗಿರಲೇಬೇಕು. ಬಟ್ಟೆ ಬೇಡ ಎಂದು ಹೇಳುವುದು ನಮ್ಮ ಕಣ್ಣಿಗೆ ಮಾತ್ರ ಸಾಧ್ಯವೇನೋ. ಒಂದು ವೇಳೆ ಬಟ್ಟೆಯನ್ನು ಕಣ್ಣಿಗೂ ಕಟ್ಟಿಕೊಂಡರೆ ಆಗ ಗಾಂಧಾರಿಯ ಅಪರಾವತಾರವಾದೀತು.

ನಮ್ಮಲ್ಲಿ ಸಭೆ, ಸನ್ಮಾನಗಳಾದಾಗ ಶಾಲು ಶಲ್ಯಗಳನ್ನು ಹೊದೆಸಿ ವೇದಿಕೆಯಲ್ಲಿ ಇರುವವರನ್ನು ಗೌರವಿಸಲಾಗುತ್ತದೆ. ಬಹುಶಃ ಈ ಶಾಲಿನ ಸಮಾನಾರ್ಥಕ ಶಬ್ದವಾದ ಶಲ್ಯದಿಂದಲೇ ಮಹಾಭಾರತದಲ್ಲಿ ಕರ್ಣನ ಸಾರಥಿಯಾಗಿದ್ದ ಶಲ್ಯನ ಹೆಸರಿನ ಉಗಮಕ್ಕೆ ಕಾರಣವಾಯಿತೋ